# ಆರೋಗ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಡಿ. ೧೩- ಅವಕಾಶ ವಂಚಿತರಿಗೆ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಕ್ರಮ ಹ್ಯೂಮಾನಿಟಿ ಫೌಂಡೇಷನ್, "ಪರಿಕ್ರಮ ಅಡ್ರೆಸ್ ಸ್ಕೂಲ್ ಹೆಲ್ತ್ ಅವಾರ್ಡ್" ನೀಡಲು ನಿರ್ಧರಿಸಿದ್ದು, ಅರ್ಹ ಶಾಲೆಗಳಿಂದ ಅರ್ಜಿ ಆಹ್ವಾನಿಸಿದೆ.

ಪ್ರಶಸ್ತಿಗೆ ಕೌನ್ಸೆಲಿಂಗ್ ಮತ್ತು ಮಾನಸಿಕ ಆರೋಗ್ಯಕ್ಕೆ ಸಕ್ರಿಯ ಕಾರ್ಯಕ್ರಮ ಹಮ್ಮಿಕೊಂಡಿರುವ ಶಾಲೆ, ಆರೋಗ್ಯ ಶಿಕ್ಷಣ, ಶೌಚ ಕಾಲದ ಅಭ್ಯಾಸ, ನೈರ್ಮಲ್ಯದ ಅಭ್ಯಾಸ, ತಂಬಾಕು, ಮದ್ಯಪಾನ ಉತ್ಪನ್ನಗಳ ತಡೆಯುವ ಕಾರ್ಯಕ್ರಮ ಸೇರಿದಂತೆ, ಇತರೆ ಆರೋಗ್ಯ ಸೇವೆ ನಡೆಸುವ ಶಾಲೆಗಳು ಅರ್ಜಿ ಸಲ್ಲಿಸಬಹುದು.

ಬರುವ ಜನವರಿ 10 ರೊಳಗೆ ಉಚಿತವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ www.schoolhealthaward.com ಅನ್ನು ಸಂಪರ್ಕಿಸಬಹುದು.